<u>**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**</u>

**ಸಿ.ಸಿ. ಸಂಖ್ಯೆಃ 100/2024**

**ಸಾಕ್ಷಿಯನ್ನು ದಿಃ 12.01.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ದಿನೇಶ | ಸಿಡಬ್ಲ್ಯೂಃ 6 | ಪಿಡಬ್ಲ್ಯೂಃ 5 |
| ತಂದೆಯ ಹೆಸರು | ನಂಜನಾಯಕ | | |
| ವಯಸ್ಸು | 25 ವರ್ಷ | | |
| ಕೆಲಸ | ಮಣ್ಣಪುರಂ ಫೈನಾನ್ಸ್ ನಲ್ಲಿ ನೌಕರ | | |
| ವಾಸಸ್ಥಳ | ಬೋರೆದೇವರ ಮಂಟಿಕೊಪ್ಪಲು, | | |

<u>**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**</u>

ಸಾಕ್ಷಿ ನಿಪಿ-1ರ ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸುಮಾರು ಒಂದು ವರ್ಷದ ಹಿಂದೆ ಹುಣಸೂರಿನ ಕಲ್ಕುಣಿಕೆಯಲ್ಲಿ ಮಾಡಿದ್ದೇನೆ. ಅಲ್ಲಿ ಪೋಲಿಸರ ಕೋರಿಕೆಯ ಮೇರೆಗೆ ಸಹಿ ಹಾಕಿದ್ದೇನೆ. ನನ್ನ ಜೊತೆ ಚಾಸಾ-5 ರವರು ಹಾಜರಿದ್ದರು. ಸ್ಥಳ ಯಾರು ತೋರಿಸಿದರು ಮತ್ತು ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು ಸಹಿ ಮಾಡಿದಾಗ ಮಧ್ಯಾಹ್ನ 12 ಗಂಟೆಯಾಗಿತ್ತು.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

<u>**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**</u>

ಚಾಸಾ-1 ಮತ್ತು ಆರೋಪಿತರ ಮಧ್ಯೆ ಆದ ಗಲಾಟೆಯ ಸಂಬಂಧ ಪೋಲಿಸರು ದಿಃ 18.12.2023 ರಂದು ಹುಣಸೂರು ಪಟ್ಟಣದ ಕಲ್ಕುಣಿಕೆ ಹೌಸಿಂಗ್ ಬೋರ್ಡ್ LIG -55 ರ ವಾಸದ ಮನೆಗೆ ಮಹಜರು ಮಾಡಲು ಬಂದಾಗ ನಾನು ಮತ್ತು ಚಾಸಾ-5 ರವರು ಹಾಜರಿದ್ದೆವು ಮತ್ತು ಚಾಸಾ-1ರವರು ಸ್ಥಳ ತೋರಿಸಿದ ಮೇರೆಗೆ ಬೆಳಿಗ್ಗೆ 11 ರಿಂದ

11.45ರವರೆಗೆ ನಿಪಿ-1ರ ಮಹಜರನ್ನು ಮಾಡಲಾಗಿದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಚಾಸಾ-1 ರವರು ಧರಿಸಿದ್ದ ಕರಿಮಣಿ ಸರ ಕಿತ್ತು ಹೋಗಿದ್ದು, ಅದರಲ್ಲಿ 4 ಗುಂಡುಗಳು, ಎರಡು ಲಕ್ಷ್ಮೀ ಕಾಸು, 3 ಕಪ್ಪು ಮತ್ತು ಕೆಂಪು ಹವಳಗಳಿದ್ದು, ಅದನ್ನು ಚಾಸಾ-1 ರವರು ಪೋಲೀಸರಿಗೆ ತೋರಿಸಿದರು ಎಂದರೆ ಸರಿಯಲ್ಲ. ಅದನ್ನು ಚಾಸಾ-1 ರವರು ಧರಿಸಬೇಕಾಗಿದ್ದ ಕಾರಣ ಪೋಲಿಸರು ಸದರಿ ಮಾಂಗಲ್ಯ ಸರವನ್ನು ಚಾಸಾ-1 ರವರಿಗೆ ವಾಪಸ್ಸು ಹಸ್ತಾಂತರಿಸಿದರು ಎಂದರೆ ಸರಿಯಲ್ಲ. ಸದರಿ ಮಾಂಗಲ್ಯ ಸರವನ್ನು ಗಲಾಟೆಯ ಸಮಯದಲ್ಲಿ ಆರೋಪಿತರು ಕಿತ್ತು ಹಾಕಿದರು ಎಂದು ಚಾಸಾ-1 ರವರು ಮಹಜರು ಸಮಯದಲ್ಲಿ ಹೇಳಿದರು ಎಂದರೆ ಗೊತ್ತಿಲ್ಲ. ನನಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. SP ಪರ ಶ್ರೀ. RKM ವಕೀಲರಿಂದಃ**

ಮಹಜರಿಗೆ ಬರುವಂತೆ ಪೋಲಿಸರು ನೋಟೀಸ್ ಕಳುಹಿಸಿಲ್ಲ. ನನಗೆ ಘಟನೆಯ ಬಗ್ಗೆ ಗೊತ್ತಿಲ್ಲ. ನಿಪಿ-1(ಬಿ) ಸಹಿಯನ್ನು ಠಾಣೆಯಲ್ಲಿ ಹಾಕಿದ್ದೇನೆ ಎಂದರೆ ಸರಿಯಲ್ಲ. ತನಿಖಾಧಿಕಾರಿಗೆ ಸಹಾಯವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.